# ಶ್ರೀ ನಾರಾಯಣ ವರ್ಮ

"ವರ್ಮ" ಎಂದರೆ ಕವಚ, (Armour) 'ನಾರಾಯಣವರ್ಮ' ಎಂದರೆ ನಾರಾಯಣನ ಅನೇಕ ನಾಮಗಳಿಂದ ತಯಾರಿಸಿದ ನಿಲುವಂಗಿ. ಈ ನಿಲುವಂಗಿಯನ್ನು ಧರಿಸಿದರೆ ಧಾರಕನ ಸರ್ವಾಂಗಗಳಿಗೂ ರಕ್ಷಣೆ ನಿಶ್ಚಯ. (Protection guaranteed from invisible armour). ಪ್ರಾಯಶಃ ಶ್ರೀ ಪುರಂದರದಾಸರು ಇಂಥ ನಾಮಗಳ ನಿಲುವಂಗಿಯನ್ನು ತೊಟ್ಟೇ 'ನಿನ್ನ ನಾಮದ ಬಲ ಒಂದಿದ್ದರೆ ಸಾಕೋ' ಎಂದು ಸ್ತೋತ್ರ ಮಾಡಿರಲು ಸಾಧ್ಯ.

ಈ 'ನಾರಾಯಣವರ್ಮ' ಅಥವಾ ನಾರಾಯಣ ನಿಲುವಂಗಿಯನ್ನು ಕೊಂಡು ಕೊಳ್ಳಲು ಯಾವ ಪಟ್ಟಣ ಪೇಟೆಗಳಲ್ಲಿ ತಿರುಗಾಡಿ ಹುಡುಕಬೇಕಾದದ್ದಿಲ್ಲ. ಅದು ಅಲ್ಲಿ ದೊರೆಯುವುದೂ ಅಲ್ಲ, ಇದೊಂದು ಸ್ತೋತ್ರರೂಪವಾದ ಮಂತ್ರ. ಈ ಮಂತ್ರೋಚ್ಚಾರಣೆಯಿಂದಲೇ ಒಂದು ಅತೀಂದ್ರಿಯ ರಕ್ಷಾಕವಚವು, ಮಂತ್ರಧಾರಕನನ್ನು ಆವರಿಸಿ ರಕ್ಷಿಸುತ್ತದೆ. ಈ ನಾರಾಯಣ ಎಂಬ ನಾಮವು ರಕ್ತ ಮೇಧಸ್ಸು ಮಜ್ಜಾದಾಟಿ ಅಸ್ಥಿಗತವಾಗಿ ಅಸ್ಥಿಗಳನ್ನೂ ಬಲಪಡಿಸುತ್ತದೆ. ಅಂತಃ ಶತ್ರು ಮತ್ತು ಬಹಿಶ್ಶತ್ರುಗಳಿಂದ ರಕ್ಷಣೆ ಮಾತ್ರವಲ್ಲದೇ ಮಂತ್ರ ಪಾಠಕನು ಶ್ರೀಮನ್ನಾರಾಯಣನ ಅನುಗ್ರಹಕ್ಕೂ ಪಾತ್ರನಾಗುತ್ತಾನೆ.

ಈ ನಾರಾಯಣವರ್ಮ ಸ್ತೋತ್ರರೂಪವಾದ ಮಂತ್ರವನ್ನು ವಿದ್ಯೆ ಎಂದೂ ಸಹ ವರ್ಣಿಸಿದ್ದಾರೆ. 'ಇಮಾಂ ವಿದ್ಯಾಂ ಪುರಾ ಕಶ್ಚಿತ್ ಕೌಶಿಕೋ ಧಾರಯನ್ ದ್ವಿಜಃ' ಮತ್ತು 'ಏತಾಂ ವಿದ್ಯಾಮಧಿಗತೋ ವಿಶ್ವರೂಪಾಚ್ಛತಕ್ರತುಃ' ಎಂದು ನಾರಾಯಣ ವರ್ಮದಲ್ಲಿಯೇ ಉಕ್ತವಾಗಿದೆ. ವಿದ್ಯೆ ಎಂದರೆ ಅದರಲ್ಲಿ ರಹಸ್ಯಗಳಿವೆ ಎಂದರ್ಥ. ಗುರೂಪದೇಶ ಅವಶ್ಯಕ ಎಂದು ಸೂಚಿಸುತ್ತದೆ ಮತ್ತು ಗುರೂಕ್ತ ಕ್ರಮದಿಂದ ವಿದ್ಯೆಯನ್ನು ಸಾಧಿಸಬೇಕು. ತದ್ವಾರಾ ಶ್ರೀಹರಿಯ ಅನುಗ್ರಹ ಪಡೆಯಬೇಕು ಎಂದು.

ಈ ವಿದ್ಯೆಯ ಅತಿಶಯ ಲಾಭ ಪಡೆದ ವ್ಯಕ್ತಿಗಳೆಂದರೆ ದೇವೇಂದ್ರ, ದಧೀಚಿ ಋಷಿ, ಕೌಶಿಕ ಗೋತ್ರದ ಒಬ್ಬ ದ್ವಿಜ. ಈ ಮೂವರು, ದೇವ, ಋಷಿ ಮತ್ತು ಮಾನುಷಾಧಿಕಾರವನ್ನು ಸೂಚಿಸಲು ಈ ಮೂವರ ಉದಾಹರಣೆ, ಪರೀಕ್ಷಿತರಾಜನಿಗೂ ಶುಕಾಚಾರ್ಯರು ಉಪದೇಶ ಮಾಡಿದರು.

ಶ್ರೀಮದ್ಭಾಗವತ ಷಷ್ಠಸ್ಕಂಧದ ಅಷ್ಟಮಾಧ್ಯಾಯದಲ್ಲಿ ಪರೀಕ್ಷಿತ ರಾಜನು ಶುಕಾಚಾರ್ಯರಿಂದ ನಾರಾಯಣವರ್ಮದ ಅದ್ಭುತ ಮಹಿಮೆಯನ್ನು ಶ್ರವಣಮಾಡಿ ಆ ಮಂತ್ರ ಸಾಮರ್ಥ್ಯದ ಶ್ರೇಷ್ಠತೆಯನ್ನರಿತು ತನಗೂ ಆಮಂತ್ರವನ್ನುಪದೇಶಿಸಬೇಕೆಂದು ಪ್ರಾರ್ಥಿಸುತ್ತಾನೆ.

ಯಯಾಗುಪ್ತಃ ಸಹಸ್ರಾಕ್ಷಃ ಸವಾಹಾನ್ ರಿಪುಸೈನಿಕಾನ್। ಕ್ರೀಡನ್ನಿವ ವಿನಿರ್ಜಿತ್ಯ ತ್ರೈಲೋಕ್ಯಾನ್ ಬುಭುಜೇಶ್ರಿಯಂ॥
ಭಗವನ್ ತನ್ಮಮಾಖ್ಯಾಹಿ ವರ್ಮನಾರಾಯಣಾತ್ಮಕಂ।

ಯಾವ ನಾರಾಯಣವರ್ಮ ಮಂತ್ರೋಪಾಸನೆಯಿಂದ ದೇವೇಂದ್ರನು ತನ್ನ ಶತ್ರುಗಳನ್ನು ಚಂಡಿನ ಆಟವಾಡಿ ಗೆಲ್ಲುವಂತೆ ನಿರಾಯಾಸವಾಗಿ (ಶ್ರಮವಹಿಸಿ ಯುದ್ಧಮಾಡಿದಂತಲ್ಲ) ಜಯಗಳಿಸಿ ಮೂರುಲೋಕದ ಐಶ್ವರ್ಯವನ್ನು ಭೋಗಿಸುವನೋ ಅಂಥ ನಾರಾಯಣವರ್ಮವನ್ನು ತನಗೆ ಉಪದೇಶಮಾಡಲು ಪರೀಕ್ಷಿತರಾಜನು ಪ್ರಾರ್ಥಿಸಿದನು.

ಈ ದಿವ್ಯವಾದ ಮಂತ್ರವನ್ನು ಸ್ವರ್ಗಾಧಿಪತಿಯಾದ ದೇವೇಂದ್ರನು ವಿಶ್ವರೂಪಾಚಾರ್ಯರಿಂದ ಉಪದೇಶ ಹೊಂದಿದನು.

'ನಾರಾಯಣಮಯಂ ವರ್ಮ ಸನ್ನಹ್ಯೇದ್ಭಯ ಆಗತೆ। ದೈವಭೂತಾತ್ಮ ಕರ್ಮಭ್ಯೋ ನಾರಾಯಣಮಯಃ ಪುಮಾನ್॥

ತ್ರಿವಿಧ ತಾಪಗಳಿಂದ ಪೀಡಿತನಾದ, ಭಯಗ್ರಸ್ತನಾದ ಮನುಷ್ಯನು ನಾರಾಯಣ ವರ್ಮವಿದ್ಯೆಯನ್ನು ಸಾಧನೆ ಮಾಡುವದರಿಂದ ತ್ರಿವಿಧ ಪೀಡಾ ಪರಿಹಾರವಾಗುವದೆಂದು ತಿಳಿಯುತ್ತದೆ.

ಈ ಸ್ತೋತ್ರ ಮಂತ್ರದ ಮೊದಲಿನ ಹತ್ತು ಶ್ಲೋಕಗಳಲ್ಲಿ ದೇವೇಂದ್ರನು ಅತಿ ಸುಲಭವಾಗಿ ಶತ್ರುಗಳನ್ನು ಜಯಿಸಿದನೆಂಬ ವರ್ಣನೆ ಇದೆ. ತ್ವಷ್ಟೃನಾಮಕ ಸೂರ್ಯನ ಸುತ ವಿಶ್ವರೂಪಾಚಾರ್ಯರಿಂದ ಇಂದ್ರನು ಮಂತ್ರೋಪದೇಶ ಹೊಂದಿದನೆಂದು ತಿಳಿಯುತ್ತದೆ. ಮಂತ್ರ ಪಠಣದ ಮೊದಲು ಶುಚಿತ್ವ ಆಚಮನ ಪೂರ್ವ, ಅಥವಾ ಉತ್ತರಾಭಿಮುಖವಾಗಿ ಆಸೀನನಾಗ ತಕ್ಕ ವಿಷಯವನ್ನು ತಿಳಿಸಿದ್ದಾರೆ. ಇದಾದಮೇಲೆ ನಾರಾಯಣ ಅಷ್ಟಾಕ್ಷರ ಮಂತ್ರದಿಂದಲೂ ವಾಸುದೇವ ದ್ವಾದಶಾಕ್ಷರ ಮಂತ್ರದಿಂದಲೂ ಮತ್ತು ಶ್ರೀ ವಿಷ್ಣು ಷಡಕ್ಷರ ಮಂತ್ರದಿಂದಲೂ ದೇಹಾದ್ಯಂತ ಅಕ್ಷರನ್ಯಾಸ, ಅಂಗುಲೀನ್ಯಾಸ (ಕರನ್ಯಾಸ) ಮತ್ತು ಹೃದಯಾದಿ ನ್ಯಾಸಗಳನ್ನು ಮಾಡಿಕೊಳ್ಳುವ ವಿಧಾನವನ್ನು ತಿಳಿಸುತ್ತಾರೆ, ಶುಕಾಚಾರ್ಯರು.

ನಂತರ ಧ್ಯಾನಕ್ಕೆ ವಿಷಯ ರೂಪವಾಗಿ 'ಆತ್ಮಾನಂ ಪರಮಂ ಧ್ಯಾಯೇತ್ ಧ್ಯೇಯಂ ಷಟ್ಶಕ್ತಿಭಿರ್ಯುತಂ' ಷಟ್ಶಕ್ತಿಯುತವಾದರೂಪ, ಗುಣ, ಕ್ರಿಯಾ ವಿಶಿಷ್ಟನಾದ ಪರಮಾತ್ಮನ ಧ್ಯಾನಮೂರ್ತಿಯನ್ನು ಮನಸಾ ಚಿಂತನೆಯನ್ನಾರಂಭಿಸಿ, ಇಪತ್ತುನಾಲ್ಕು ಶ್ಲೋಕಗಳಿಂದ, ಸರ್ವದೇಶಗಳಲ್ಲಿ, ಸರ್ವಕಾಲದಲ್ಲಿ ಮತ್ತು ಸರ್ವಾವಸ್ಥೆಗಳಲ್ಲಿ ನಾರಾಯಣನನ್ನು ರಕ್ಷಣೆಗಾಗಿ, ಪರಮಾತ್ಮನ ನಾಮರೂಪಗಳಿಂದ 'ಅಧಿಕಾರ' ಪ್ರಾಪ್ತಿಗಾಗಿ ಪ್ರಾರ್ಥಿಸುತ್ತಾನೆ.

ಅಷ್ಟಬಾಹುಗಳಿಂದ ಅಷ್ಟಾಯುಧ ಧರಿಸಿದ ಗರುಡಗಮನನಾದ ಶ್ರೀಹರಿಯು ಸರ್ವಪ್ರಕಾರದಿಂದಲೂ ರಕ್ಷಕನಾಗಲಿ.

ಜಲದಲ್ಲಿ ಮತ್ಸ್ಯಮೂರ್ತಿಯು, ಸ್ಥಳದಲ್ಲಿ (ಭೂಮಿಯಲ್ಲಿ) ವಾಮನಮೂರ್ತಿಯೂ ಅಂತರಿಕ್ಷದಲ್ಲಿ ತ್ರಿವಿಕ್ರಮ ಮೂರ್ತಿಯೂ ರಕ್ಷಕರಾಗಲಿ.

ಯಾವ ದೇವನ ಮಹಾಟ್ಟಹಾಸದ ಗರ್ಜನೆಯಿಂದ ದಿಕ್ಕು ದಿಕ್ಕುಗಳಲ್ಲಿ ಭಯದಿಂದ ಕ್ರೂರ ಪ್ರಾಣಿಗಳು ವಿದ್ರವಿಸುವವೋ ಮತ್ತು ಕೆಲವು ಪ್ರಾಣಿಗಳಿಗೆ ಗರ್ಭಸ್ರವಿಸುವದೋ, ಯಾವದೇವನು ಅಸುರ ಭಯಂಕರ ರಾಜನಾದ ಹಿರಣ್ಯಕಶಿಪುವನ್ನು ಸಂಹರಿಸಿದನೋ ಅಂಥ ಶ್ರೀ ನರಸಿಂಹನು ಕೋಟೆ, ಕಾಡು ಯುದ್ಧ ಮುಖದಲ್ಲಿ ರಕ್ಷಕನಾಗಲಿ.

ಅರಕ್ಷಿತ ಮಾರ್ಗಗಳಲ್ಲಿ ಶ್ರೀ ವರಹಾದೇವರೂ, ಗಿರಿಕಂಧರಗಳಲ್ಲಿ ಶ್ರೀರಾಮ ದೇವರೂ ವಿಪ್ರವಾಸಗಳಲ್ಲಿ (ಕುಟೀರಗಳಲ್ಲಿ) ಶ್ರೀ ಲಕ್ಷ್ಮಣರೂ ರಕ್ಷಕರಾಗಲಿ. ಶಾರ್ಙಧನು ಹಿಡಿದ ಶ್ರೀ ನಾರಾಯಣನು ಅಖಿಲ ಪ್ರಮಾದಗಳಿಂದಲೂ, ಆಯೋಗಾದಿಗಳಿಂದ ಶ್ರೀದತ್ತನೂ, ಭಗವಾನ್ ಕಪಿಲನು ಕರ್ಮಬಂಧನಗಳಿಂದ ಕಾಪಾಡಲಿ. ಸನತ್ಕುಮಾರರು ಕಾಮಾದಿ ಪೀಡೆಗಳನ್ನು ದೂರಮಾಡಲಿ, ಶ್ರೀಹಯಗ್ರೀವ ದೇವರು ಮಾರ್ಗದಲ್ಲೂ, ದೇವ ದ್ವಿಜರಿಗೆ ಸಂಭವಿಸಕ್ಕ ದ್ರೋಹ ದುಷ್ಕರ್ಮಗಳಿಂದ ರಕ್ಷಿಸಲಿ. ನಾರದರು, ಭಗವಂತನನ್ನು ಬಿಟ್ಟು ಅನ್ಯಾರಾಧನೆ ಮಾಡಿದ ದೋಷವನ್ನು ಮತ್ತು ಶ್ರೀ ಕೂರ್ಮ ರೂಪಿಯಾದ ಹರಿಯು ಮಿಕ್ಕ ಎಣಿಸಲಾರದ ಪಾಪದಿಂದ ರಕ್ಷಿಸಲಿ.

ಭಗವಾನ್ ಧನ್ವಂತರಿಯು ಆಹಾರ ಅನಿಯಮನದಿಂದುಂಟಾದ ಅಪಥ್ಯ ದೋಷಗಳಿಂದ ರಕ್ಷಿಸಲಿ. ಶ್ರೀ ವೃಷಭನಾಮಕ ಪರಮಾತ್ಮನು ದ್ವಂದ್ವಭಯಗಳಿಂದ (ಒಳಗಿನ ಮತ್ತು ಹೊರಗಿನ) ನಮ್ಮನ್ನು ರಕ್ಷಿಸಲಿ, ಶ್ರೀ ಯಜ್ಞನಾಮಕ ಪರಮಾತ್ಮನು ಜನಗಳಿಂದಾಗತಕ್ಕ ಅಪಾಯಗಳಿಂದಲೂ, ಮತ್ತು ಕ್ರೋಧವಶರಾದ ಬಲಿಷ್ಠರಿಂದ ಶೇಷನೂ ರಕ್ಷಿಸಲಿ. ಶ್ರೀ ಭಗವಾನ್ ವ್ಯಾಸರು ಅಜ್ಞಾನಾದಿಗಳಿಂದಲೂ, ಬುದ್ಧನ ಪಾಖಂಡಿ ಗಣದಿಂದಾಗತಕ್ಕ ಪ್ರಮಾದದಿಂದಲೂ ರಕ್ಷಿಸಲಿ, ಶ್ರೀ ಕೇಶವನು ಪ್ರಾತಃಕಾಲ ಗದೆಯಿಂದ ರಕ್ಷಿಸಲಿ, ಶ್ರೀ ವೇಣುಗೋಪಾಲನು, ಪ್ರಾತರನಂತರದಲ್ಲಿಯೂ, ನಾರಾಯಣನು ಪೂರ್ವಾಹ್ನದಲ್ಲಿಯೂ, ವಿಷ್ಣುವು ಮಧ್ಯಾಹ್ನದಲ್ಲಿಯೂ, ಮಧುನಾಮಕ ದೈತ್ಯಸಂಹಾರಿಯು ಅಪರಾಹ್ನದಲ್ಲಿಯೂ, ಸಾಯಂಕಾಲ ಮಾಧವನು, ಹೃಷೀಕೇಶನು ಪೂರ್ವರಾತ್ರಿಯಲ್ಲಿಯೂ, ಪದ್ಮನಾಭನು ಅರ್ಧರಾತ್ರಿಯಲ್ಲಿಯೂ, ಅಪರ ರಾತ್ರಿಯಲ್ಲಿ ಶ್ರೀ ವತ್ಸದಲ್ಲಿ ಲಕ್ಷ್ಮೀದೇವಿಯನ್ನು ಧಾರಣಮಾಡಿದ ಈಶನೂ ಬೆಳಗಿನ ಜಾವದಲ್ಲಿ ಖಡ್ಗಧಾರಿಯಾದ ಜನಾರ್ದನನೂ ರಕ್ಷಿಸಲಿ, ದಾಮೋದರನು ಅನುಸಂಧಿ ಸಮಯದಲ್ಲಿಯೂ ಮತ್ತು ಕಾಲಮೂರ್ತಿಯಾದ ಭಗವಾನ್ ವಿಷ್ಣುವು ಪ್ರಭಾತ ಸಮಯದಲ್ಲಿಯೂ ರಕ್ಷಿಸಲಿ.

ಹೇ ಸುದರ್ಶನ, ಯುಗಾಂತದಲ್ಲಿ ಅತಿ ತೀಕ್ಷ್ಣವಾದ ಅಗ್ನಿಯಿಂದ ದಹಿಸುವಂತೆ ಅರಿಸೈನ್ಯವನ್ನು ದಹಿಸು.

'ಸುದರ್ಶನ ಮಹಾಜ್ವಾಲ ಕೋಟಿಸೂರ್ಯ ಸಮಪ್ರಭ।
ಅಜ್ಞಾನಾಂಧಸ್ಯಮೇ ನಿತ್ಯಂ ವಿಷ್ಣೋರ್ಮಾಗಂ ಪ್ರದರ್ಶಯ॥

ಹೇ ಗದಾಧರನೆ ನಿನ್ನ ಅಸ್ತ್ರಪ್ರಯೋಗದ ಅಘಾತದಿಂದುಂಟಾದ ಅಗ್ನಿಕಣಗಳು, ಕೂಷ್ಮಾಂಡ ವೈನಾಯಕ, ಯಕ್ಷರಾಕ್ಷಸ, ಮತ್ತು ಗ್ರಹಾದಿಗಳನ್ನು ಸುಟ್ಟು ಭಸ್ಮೀಭೂತರನ್ನಾಗಿಮಾಡಲಿ.

ಪಾಂಚಜನ್ಯ ಧಾರಣಮಾಡಿದ ಹೇ ಕೃಷ್ಣಮೂರ್ತಿಯೇ ಶಂಖದ ಭಯಂಕರ ಸ್ವರದಿಂದ ಶತ್ರುಗಳ ಹೃದಯ ದ್ರವಣವಾಗಲಿ. ನಿನ್ನ ತತ್ತತ್ಕಾಲಯೋಗ್ಯ (ಭಯ, ಸೌಮ್ಯ) ದೃಷ್ಟಿಯಿಂದ ಪ್ರೇತಮಾತೃ ಪಿಶಾಚ ಗ್ರಹ ಇವುಗಳು ಓಡಿಹೋಗಲಿ.

ಹೇ ಈಶ, ನಿನು ಚಕ್ರವನ್ನೂ ಅತಿ ನಿಶಿತ ಖಡ್ಗವನ್ನೂ ಧಾರಣಮಾಡಿ ಅರಿಸೈನ್ಯವನ್ನು ನಾಶಮಾಡು, ನಿನ್ನ ತೀಕ್ಷ್ಣ ದೃಷ್ಟಿಯಿಂದಲೂ ಚರ್ಮ, ಶತಚಂದ್ರಾಯುಧಗಳಿಂದಲೂ ಶತ್ರುಗಳನ್ನೂ ಮತ್ತು ನಮ್ಮ ಪಾಪಗಳನ್ನೂ ಹರಣಮಾಡು.

ನಮಗೆ ಗ್ರಹಾದಿಗಳಿಂದಲೂ, ಉಲ್ಕಾಪಾತಾದಿಗಳಿಂದಲೂ, ಭೂತಗಳಿಂದಲೂ ವ್ಯಸನಗಳಿಂದಲೂ, ಹಾವುಗಳಿಂದಲೂ, ಇತರ ಕಚ್ಚುವ ಪ್ರಾಣಿಗಳಿಂದಲೂ ಮತ್ತು ಇತರ ಸರ್ವಾಪತ್ತುಗಳಿಂದಲೂ ಭಗವಂತನ ನಾಮ ರೂಪ ಮತ್ತು ಅಸ್ತ್ರ ಇವುಗಳ ಸ್ಮರಣೆಯು, ನಿವಾರಣೆಯನ್ನುಂಟುಮಾಡಲಿ. ಸರ್ವ ವಿಘ್ನಗಳಿಂದಲೂ, ಮತ್ತು ಶ್ರೇಯಸ್ಸಿಗೆ ಪ್ರತಿಬಂಧಕವಾದ ಅನೇಕ ಅವಾಂತರ ಅಡೆತಡೆಗಳಿಂದಲೂ ನಮ್ಮನ್ನು ರಕ್ಷಣೆಮಾಡಲಿ.

ಗರುಡನು ಸ್ತೋತ್ರಮಾಡಿದ ಸ್ತೋತ್ರ ಸಮೂಹದಿಂದಲೂ (ಸಾಮವೇದಾದಿಗಳಿಂದ) ಮತ್ತು ವಿಷ್ವಕ್ಸೇನನು ಶ್ರೀಹರಿಗೆ ನಿವೇದನ ಮಾಡಿದ ನಾಮಗಳಿಂದಲೂ ನಾನು ಸ್ತೋತ್ರಮಾಡುತ್ತೇನೆ ಇವುಗಳಿಂದ ಸರ್ವಾಪತ್ತುಗಳಲ್ಲಿ ಶ್ರೀಹರಿಯ, ನಾಮರೂಪ, ಗುಣ, ಕ್ರಿಯೆ, ಆಯುಧಗಳ ಸ್ಮರಣೆಯಿಂದಲೂ ಉಚ್ಚಾರಣೆಯಿಂದಲೂ ನಮ್ಮ ಮನಸ್ಸು, ಬುದ್ಧಿ, ಇಂದ್ರಿಯ ಮತ್ತು ಪ್ರಾಣಗಳನ್ನು ಅತಿ ಸನಿಹದಲ್ಲಿದ್ದ ರಕ್ಷಕನಂತೆ ರಕ್ಷಿಸಲಿ.

ಯಾವ ಭಗವಂತನು ಸರ್ವ ಸದಸದ್ವಸ್ತು ವ್ಯಾಪಿಯೋ ಅಂಥ ಸತ್ಯಸ್ವರೂಪನಾದ ಭಗವಂತನಿಂದ ನಮ್ಮ ಉಪದ್ರವಗಳು ಕಳೆದುಹೋಗಲಿ. ತತ್ತದಾಯುಧ ವ್ಯಾಪಕನಾದ 'ಸ್ವಗತ ಭೇದವಿವರ್ಜಿತನಾದ' ಭೂಷಣ, ಆಯುಧ, ಲಿಂಗ ಸಂಜ್ಞೆಗಳಿಂದ ಕರೆಯಲ್ಪಟ್ಟ ಶ್ರೀಹರಿಯು ಶಕ್ತಿಯನ್ನು ಧರಿಸಿ ನಮ್ಮನ್ನು ಕಾಪಾಡಲಿ.

ಸತ್ಯಸ್ವರೂಪನಾದ ಸರ್ವಜ್ಞನಾದ ಭಗವಾನ್ ಶ್ರೀಹರಿಯು ಸದಾ ಸರ್ವಸ್ಥಳಗಳಲ್ಲಿ ರಕ್ಷಿಸಲೆಂದು ಪ್ರಾರ್ಥನೆ. ಕೊನೆಯದಾಗಿ ಎಲ್ಲ ದಿಕ್ಕುಗಳಿಂದಲೂ ರಕ್ಷಿಸಲೆಂದು ಪ್ರಾರ್ಥನೆ ಮಾಡುತ್ತಾರೆ. ನರಸಿಂಹ ದೇವರನ್ನು, ನರಸಿಂಹನ ಗರ್ಜನೆ ನಾದವು ಎಲ್ಲ ಕಡೆಯಲ್ಲಿಯೂ ತುಂಬಿ ಲೋಕಭಯವನ್ನು ನಿವಾರಣೆಮಾಡಲಿ ಎಂದು, ನಾರಾಯಣವರ್ಮ ಪ್ರಾರ್ಥನೆ ಸಮಾಪ್ತಿಯಾಗುತ್ತದೆ.

ನಾರಾಯಣವರ್ಮ ಸ್ತೋತ್ರಾಂತ್ಯದಲ್ಲಿ, ಹನ್ನೊಂದು ಶ್ಲೋಕಗಳಿಂದ ಫಲಶೃತಿಯನ್ನೊಳಗೊಂಡ ಉಪಸಂಹಾರ. ಇಂದ್ರನು ಈ ಮಂತ್ರ ಅಥವಾ ಈ ವಿದ್ಯಾಸಾಮರ್ಥ್ಯದಿಂದ ಅಸುರ ಸೈನ್ಯವನ್ನು ಸೋಲಿಸಿ ತ್ರೈಲೋಕ್ಯದ ಸಿರಿಯನ್ನನುಭವಿಸಿದನೆಂದು ಸ್ತೋತ್ರದಲ್ಲಿ ಪದೇ ಪದೇ ಹೇಳಿದೆ.

ಈ ನಾರಾಯಣವರ್ಮ ವಿದ್ಯೆಯನ್ನು ಸಾಧನೆಮಾಡಿ ಕೌಶಿಕ ಗೋತ್ರದ ಬ್ರಾಹ್ಮಣನೊಬ್ಬನು ಅದ್ಭುತ ಸಿದ್ಧಿಯನ್ನು ಪಡೆದನು. ಈ ಮಂತ್ರವನ್ನು ದ್ವಿಜನದೆಷ್ಟು ಸಲ ಜಪಿಸಿದ್ದನೋ ಆ ಶ್ರೀಮನ್ನಾರಾಯಣನಿಗೇ ಮಾತ್ರ ಗೊತ್ತು.

ಆ ದ್ವಿಜನು ಭೌತಿಕಕಾಯ ಬಿಡುವವೇಳೆ ಬರಲಾಗಿ ಆ ಕಾಲದಲ್ಲಿ ಅವನು ಮರುಭೂಮಿಯಲ್ಲಿದ್ದ ಪ್ರಯುಕ್ತ ಅಲ್ಲಿಯೇ ಈ ವಿದ್ಯೆಯನ್ನು ಧಾರಣಮಾಡಿ ಕಾಯವನ್ನು ತ್ಯಜಿಸಿದನು. ಸಂಸ್ಕಾರವಾಗದ ಪುಟ್ಟದೊಂದು ಅಸ್ಥಿಮಾತ್ರ ಅಲ್ಲಿಯೇ ಉಳಿದಿತ್ತು. ಕಾಲಾಂತರದಲ್ಲಿ ಚಿತ್ರರಥನೆಂಬ ಒಬ್ಬ ಗಂಧರ್ವನು ತನ್ನ ಸತಿಯೊಡನೆ ವಿಮಾನದಲ್ಲಿ ಕುಳಿತು ವಿಹಾರಕ್ಕೆ ಹೊರಟಾಗ, ಅವನು ಆಕಸ್ಮಿಕವಾಗಿ ಈ ಕೌಶಿಕ ಬ್ರಾಹ್ಮಣನ ಅಸ್ಥಿಯತುಂಡೊಂದನ್ನು ಅತಿಕ್ರಮಣಮಾಡುವ (ಅದರ ಮೇಲೆ ವಿಮಾನವು ಹಾರುತ್ತಿರುವ) ಸಮಯದಲ್ಲಿ, ಆ ದ್ವಿಜನ ಅಸ್ಥಿಯು ವಿಮಾನವನ್ನು ತತ್ಕಾಲದಲ್ಲಿ ಕೆಳಗೆ ಸೆಳೆಯಿತು. ಗಂಧರ್ವನ ವಿಮಾನವು ತಲೆಕೆಳಗಾಗಿ ಬಿದ್ದೇಬಿಟ್ಟಿತು. ಚಿತ್ರರಥನು ಎಲ್ಲಕಡೆಗೂ ನೋಡಿದ. ವಿಮಾನ ಬಿದ್ದ ಕಾರಣ ಗೊತ್ತಾಗಲಿಲ್ಲ. ವಿಚಿತ್ರವೆನಿಸಿತು. ಸುತ್ತ ಅಲೆದಾಡಿ ನೋಡಿದಾಗ ವಾಲಖಿಲ್ಯ ಋಷಿಗಳು ಕಣ್ಣಿಗೆ ಬಿದ್ದರು. ಅವರನ್ನು ಕಂಡು ವಿಷಯವೇನೆಂದು ವಿಚಾರಿಸಿದನು. ವಿಮಾನಬಿದ್ದಸ್ಥಳದಲ್ಲಿ ಕೌಶಿಕನೆಂಬ ಬ್ರಾಹ್ಮಣನು ಉಪಾಸನಾಮಾಡಿದ ನಾರಾಯಣವರ್ಮ ಮಂತ್ರ ಪ್ರಭಾವವು ಅಸ್ಥಿಗತವಾಗಿದೆಯೆಂದೂ, ಅಸ್ಥಿಯ ಪ್ರಭಾವವೇ ವಿಮಾನ ಪತನಕ್ಕೆ ಕಾರಣವೆಂದೂ ತಿಳಿಯಿತು. ವಾಲಖಿಲ್ಯರ ವಚನದಂತೆ ಚಿತ್ರರಥನು ಅಸ್ಥಿತಿಯನ್ನು ತೆಗೆದುಕೊಂಡು ಹೋಗಿ ಸರಸ್ವತೀ ನದಿಯಲ್ಲಿ ಗೌರವ ಪೂರ್ವಕ ವಿಸರ್ಜನೆಮಾಡಿ ಸ್ನಾನಾದಿಗಳನ್ನು ಮಾಡಿ ಪುನಃ ಬಂದು ತನ್ನ ಸತಿಯೊಡನೆ ವಿಮಾನದಲ್ಲಿ ಕುಳಿತುಕೊಂಡು ಮುಂದೆ ಪ್ರಯಾಣ ಮಾಡಿದನು. ಅದೆಷ್ಟು ವಿಸ್ಮಯಕರ ಸಾಮರ್ಥ್ಯ ಈ ಮಂತ್ರದಲ್ಲಿ!

ನಾರಾಯಣ ನಾಮ ಮಹಿಮಾ ಕೌಶಿಕರ ಅಸ್ಥಿಗತವಾಗಿ ಬಿಟ್ಟಿತು. ನಾರಾಯಣ ವರ್ಮ ವಿದ್ಯಾಧರಣೆ ಮಾಡಿದ ಕೌಶಿಕರ ಸಾಮರ್ಥ್ಯವೆಲ್ಲಿ? ತದ್ರಹಿತ ನಮ್ಮದ್ವಿಜ ಸಮಾಜವೆಲ್ಲಿ? ಅಸ್ಥಿ ಇರಲಿ, ನಮ್ಮನ್ನೇ ಬೇಕಾದವರು ತುಳಿದರೂ ಯಾರಿಗೂ ಏನೂ ಆಗುವುದಿಲ್ಲ. ಆ ಸ್ಥಿತಿ ನಮ್ಮದು.

ಆ ಕೌಶಿಕ ಮಹಾಶಯನ ಅಸ್ಥಿಯ ತುಣುಕು ಇಂದು ಇದ್ದಿದ್ದರೆ ಅಥವಾ ಅಂಥ ಮಹನೀಯರೊಬ್ಬರು ಇದ್ದಿದ್ದರೆ, ಅದನ್ನೂ ಅವರನ್ನೂ ಭಾರತ ಗಡಿಪ್ರದೇಶದಲ್ಲಿ ಸ್ಥಾಪನೆ ಮಾಡಿದ್ದರೆ ಶತ್ರುಪಕ್ಷದಿಂದ ಬರತಕ್ಕ ವಿಮಾನಗಳೆಲ್ಲವೂ ಅಪ್ರಯಾಸವಾಗಿ ತಲೆಕೆಳಗಾಗಿ ಕೆಳಗುರುಳುತ್ತಿದ್ದವು. 'ಆ್ಯಂಟಿ ಏರ್ ಕ್ರಾಫ್ಟಗನ್'ಗಳನ್ನು ಸ್ಥಾಪಿಸಿದಂತಾಗುತ್ತಿತ್ತು. ಈ ವಿದ್ಯೆಯಿಂದ ಈ ಮಟ್ಟದಲ್ಲಿ ಸಿದ್ಧಿ ಹೊಂದಿದವರನ್ನು ಇತ್ತೀಚೆಗೆ ಕಾಣೆವು. ಕೆಲಮಟ್ಟಿಗಾದರೂ ಅಧಿಕಾರಿಗಳು ಈ ಬಲಯುತ ಮಂತ್ರದ ಉಪಯೋಗ ಪಡೆಯುವದು ಲೇಸು. ಈ ಫಲಶ್ರುತಿಯಲ್ಲಿ ಬರತಕ್ಕ ಕೌಶಿಕರ ಪ್ರಭಾವವನ್ನರಿತು ಸ್ಫೂರ್ತಿಹೊಂದಿ ಸಾಧಕರು ಕೆಲಮಟ್ಟಿಗಾದರೂ ಈ ವಿದ್ಯೆ ಸಾಧಿಸಿದರೆ ಸಾಕು.

ನಾರಾಯಣವರ್ಮ ವಿದ್ಯೆ ಸಾಧನೆಮಾಡಿ ಸಿದ್ಧಿಪಡೆದ ವ್ಯಕ್ತಿಗಳಲ್ಲಿ ಮೂರನೆಯವರು ದಧೀಚಿ ಋಷಿಗಳು.

ದೇವೇಂದ್ರನಿಗೆ 'ನಾರಾಯಣವರ್ಮ'ವನ್ನುಪದೇಶಿಸಿದ ವಿಶ್ವರೂಪಾಚಾರ್ಯರಿಗೆ ಮೂರು ತಲೆಗಳಿದ್ದವು. ಯಜ್ಞದಲ್ಲಿ ಅವರು ಮುಂದೆ ದೇವತೆಗಳಿಗೆ ಆಹುತಿಕೊಟ್ಟರೂ ಮರೆಯಾಗಿ ದೈತ್ಯರಿಗೂ ಕೊಡುತ್ತಿದ್ದರು. ವಿಶ್ವರೂಪಾಚಾರ್ಯರ ಈ ವಂಚನೆ ಕೃತಿ ತಿಳಿದ ದೇವೇಂದ್ರನು, ದೈತ್ಯರಿಗೆ ಬಲವೃದ್ಧಿಯಾಗುವದೆಂದು ಯೋಚಿಸಿ ವಿಶ್ವರೂಪಾಚಾರ್ಯರನ್ನು ಸಂಹರಿಸಿದನು.

ತ್ವಷ್ಟೃನಾಮಕ ಆದಿತ್ಯನು ತನ್ನ ಮಗನನ್ನು ದೇವೇಂದ್ರನು ಕೊಂದನೆಂಬಕೋಪದಿಂದ ಇಂದ್ರನನ್ನು ಸಂಹರಿಸುವ ಮಗನನ್ನು ಪಡೆಯಲು ಯಜ್ಞ ಮಾಡಿದನು. 'ಇಂದ್ರಶತ್ರೋವಿವರ್ಧಸ್ವ' ಎಂದು ಆಹುತಿ ಹಾಕುವಾಗ ಸ್ವರ ವ್ಯತ್ಯಾಸವಾಗಿ ಇಂದ್ರನಿಂದ ಕೊಲ್ಲಲ್ಪಡುವ ಮಗನನ್ನು ಪಡೆದನು. ದಕ್ಷಿಣಾಗ್ನಿಯಿಂದ ಘೋರರೂಪದ ಶೂಲಪಾಣಿ ಪುರುಷನೊಬ್ಬನು ಬಂದನು. ಪ್ರತಿದಿನವೂ ಬಾಣದಷ್ಟು ಬೆಳೆದನು. ತೆರೆದಂಥ ದೊಡ್ಡ ಬಾಯಿಯುಳ್ಳವನಾದ್ದರಿಂದ ವೃತ್ರಾಸಿರನೆಂದು ಕರೆದರು.

ಇವನನ್ನು ದೇವತೆಗಳು ತಮ್ಮ ಅನೇಕ ದಿವ್ಯಾಯುಧಗಳಿಂದ ಪ್ರಹಾರಮಾಡಿದರು ಅವನು ಅವುಗಳನ್ನೆಲ್ಲ ನುಂಗಿಬಿಟ್ಟನು.

ಈ ಅಪಾಯಕ್ಕೆ ಪರಿಹಾರಪಡೆಯಲು, ದೇವೇಂದ್ರನು ಇತರ ದೇವತೆಗಳನ್ನೊಳಗೊಂಡು ಭಗವಂತನನ್ನು ಸ್ತೋತ್ರ ಮಾಡುತ್ತಿರಲು, ಭಗವಂತನು ಪಶ್ಚಿಮ ದಿಕ್ಕಿನಲ್ಲಿ ಶಂಖ ಚಕ್ರ ಗದಾ ಪದ್ಮಧಾರಿಯಾಗಿ ಹದಿನೇಳು ರೂಪದಿಂದ ಕಾಣಿಸಿಕೊಡನು. ಆಗ ದೇವತೆಗಳು ಭಗವಂತನನ್ನು ಸ್ತೋತ್ರಮಾಡಿ 'ಹೇ ಸ್ವಾಮೀ, ವೃತ್ರಾಸುರನು ನಮ್ಮ ತೇಜಸ್ಸನ್ನೆಲ್ಲಾ ಅಪಹರಿಸಿದ್ದಾನೆ. ಅವನನ್ನು ಸಂಹಾರಮಾಡಬೇಕು' ಎಂದು ಪ್ರಾರ್ಥಿಸಿದರು. ಭಕ್ತವತ್ಸಲನಾದ ಭಗವಂತನು, 'ದೇವೇಂದ್ರನೇ ಮತ್ತು ದೇವತೆಗಳೇ ಈಗ ನಿಮಗೆ ಮಂಗಳವಾಗಲಿ, ನೀವೆಲ್ಲರೂ ದಧೀಚಿ ಋಷಿಗಳ ಬಳಿಗೆ ಹೋಗಿರಿ. ಅವರು ಪೂರ್ವದಲ್ಲಿ **'ನಾರಾಯಣವರ್ಮ'** ವನ್ನು ಪಠಿಸಿದ್ದಾರೆ. ಅದರ ಪ್ರಭಾವದಿಂದ ಅವರ ಅಸ್ಥಿಗಳು ಕಾಠಿಣ್ಯದಲ್ಲಿ ವಜ್ರಕ್ಕೂಮೀರಿವೆ. ನೀವು ಅವರ ದೇಹವನ್ನು ಕೇಳಿಕೊಳ್ಳಿರಿ. ಅವರು ಕೊಡುವರು. ವಿಶ್ವಕರ್ಮನು ಅವರ ಎಲುಬಿನಿಂದ ವಜ್ರಾಯುಧವನ್ನು ಮಾಡಲಿ. ಅದರಿಂದ ವೃತ್ರಾಸುರನು ಸಂಹರಿಸಲ್ಪಡುವನು.' ಎಂದು ಹೇಳಿ ಭಗವಂತನು ಅಂತರ್ಧಾನನಾದನು.

ಆ ಪ್ರಕಾರ ದೇವತೆಗಳು ದಧೀಚಿ ಋಷಿಗಳ ಬಳಿಗೆ ಹೋಗಿ ಅವರ ದೇಹವನ್ನು ಕೊಡಬೇಕೆಂದು ಪ್ರಾರ್ಥಿಸಿದರು. ಆ ವಿಷಯದಲ್ಲಿ ಕೆಲವು ಚರ್ಚೆಗಳು ನಡೆದವು. ಕೊನೆಗೆ ದಧೀಚಿ ಋಷಿಗಳು ಒಪ್ಪಿ ಆತ್ಮನನ್ನು ಹೊರ ಹೊರಡಿಸಿ ದೇಹವನ್ನು ಕೊಟ್ಟರು. ಎಲುಬುಗಳನ್ನು ಸಂಗ್ರಹಿಸಿ ವಜ್ರಾಯುಧ ಮಾಡಿದರು.

ದೇವೇಂದ್ರನು ಐರಾವತವನ್ನೇರಿ ಯುದ್ಧಕ್ಕೆ ಹೊರಟಕೂಡಲೇ ವಜ್ರಾಯುಧದ ತೇಜಸ್ಸಿನಿಂದ ಶತ್ರುಗಳು ಬೆದರಿ ಓಡತೊಡಗಿದರು. ವೃತ್ರಾಸುರನು ಕೊಲ್ಲಲ್ಪಟ್ಟನು.

ಹೀಗೆ ದಧೀಚಿ ಋಷಿಗಳ ಅಸ್ಥಿಗಳು ನಾರಾಯಣ ವರ್ಮ ವಿದ್ಯಾ ಪ್ರಭಾವದಿಂದ ವಜ್ರಾಯುದ್ಧಕ್ಕಿಂತಲೂ ನಿಶಿತವಾಗಿದ್ದವು. ಬಲಿಷ್ಠನಾದ ಅಸಿರನನ್ನು ಸಂಹರಿಸುವಷ್ಟು ಪರಿಣಾಮಕಾರಿಯಾಗಿ ಪರಿಣಮಿಸಿದವು.

ಈ ಪ್ರಕಾರ ಈ ಮೂವರೂ ವ್ಯಕ್ತಿಗಳು ನಾರಾಯಣವರ್ಮದ ಸಂಪೂರ್ಣ ಲಾಭವನ್ನು ಪಡೆದರು. ಈ ಯುಗದಲ್ಲಿ ಕೂಡ ಯೋಗ್ಯತಾನುಸಾರ ಈ ಮಂತ್ರವನ್ನು ಪಠಿಸಿ ಆ ಮಟ್ಟದಲ್ಲಿ ಇಲ್ಲದಿದ್ದರೂ, ಸ್ವಸ್ವ ಯೋಗ್ಯತಾನುಸಾರವಾಗಿ ಭಗವದನುಗ್ರಹ ಸಂಪಾದಿಸಲು ಪ್ರಯತ್ನಶಾಲಿಗಳಾದವರೇ ಧನ್ಯರು.

॥ಇತಿ ಶ್ರೀಮಧ್ವೇಶಾರ್ಪಣಮಸ್ತು॥